**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,**
**ನೃಪತುಂಗ ರಸ್ತೆ, ಬೆಂಗಳೂರು-560 001**

**ಸಂಖ್ಯೆ : ಸಿ1(4)ಬಿ.ಆರ್.ಪಿ.ಹು.ಭ/07/2011-12** **ದಿನಾಂಕ : 03-06-2011**

## ಸೂಚನೆ

**ವಿಷಯ** :- ಕ್ಷೇತ್ರ ಸಂಪನ್ಮೂಲ ಕೇಂದ್ರಗಳಿಗೆ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ** :- ಸರ್ವ ಶಿಕ್ಷಣ ಅಭಿಯಾನ, ಕರ್ನಾಟಕ, ಬೆಂಗಳೂರು ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ : ಸಶಿಅ/ಶೈತ/ಸಿ1(1)/ಬಿಆರ್‌ಸಿ/2010-11 ದಿನಾಂಕ : 20-04-2011.

2 :- ದಿನಾಂಕ : 22-05-2011 ರಂದು ನಡೆದ ಲಿಖಿತ ಪರೀಕ್ಷೆ.

3 :- ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಡಿಎಸ್‌ಇಆರ್‌ಟಿ/ಎಸ್‌ಎಸ್‌ಎ/ಬಿಆರ್‌ಸಿ/ಪರೀಕ್ಷೆ/2011-12 ದಿನಾಂಕ : 28-05-2011.

* * * * *

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (2) ರ ಈ ಕಛೇರಿಯ ಆದೇಶದಲ್ಲಿ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ : 22-05-2011 ರಂದು ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ವಿಭಾಗವಾರು ಲಿಖಿತ ಪರೀಕ್ಷೆಯನ್ನು ನಡೆಸಲಾಯಿತು. ಸದರಿ ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು ಮೌಲ್ಯ ಮಾಪನ ಮಾಡಿ ಉಲ್ಲೇಖಿತ (3) ರ ಅವರ ಪತ್ರದಲ್ಲಿ ಮೆರಿಟ್ ಪಟ್ಟಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು ಮೌಲ್ಯ ಮಾಪನ ಮಾಡಿ ಉಲ್ಲೇಖಿತ (3) ರ ಅವರ ಪತ್ರದಲ್ಲಿ ಈ ಕಛೇರಿಗೆ ಸಲ್ಲಿಸಿರುವ ಮೆರಿಟ್ ಪಟ್ಟಿಯನ್ನು ಈ ಕೆಳಗೆ ಪ್ರಕಟಿಸಲಾಗಿದೆ.

ಉಲ್ಲೇಖಿತ (1) ಆದೇಶದನ್ವಯ ಲಿಖಿತ ಪರೀಕ್ಷೆಗೆ ನಿಗಧಿಪಡಿಸಿರುವ ಒಟ್ಟು ಗರಿಷ್ಟ ಅಂಕಗಳಾದ 80 ಅಂಕಗಳಿಗೆ ಕನಿಷ್ಟ 50 ಅಂಕಗಳನ್ನು ಗಳಿಸಿದವರನ್ನು ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದೆಂದು ಸೂಚಿಸಿರುವಂತೆ ಮೆರಿಟ್ ಲಿಸ್ಟ್‌ನಲ್ಲಿ 50 ಅಂಗಳನ್ನು ಗಳಿಸಿರುವ ಅಧಿಕಾರಿಗಳಿಗೆ ಲಿಖಿತ ಪರೀಕ್ಷೆಯ ನಂತರ ವ್ಯಕ್ತಿತ್ವ ಪರೀಕ್ಷೆಯನ್ನು ನಡೆಸಬೇಕಾಗಿರುವುದರಿಂದ **ದಿನಾಂಕ : 13-06-2011 ಬೆಂಗಳೂರು ವಿಭಾಗದ ಅಧಿಕಾರಿಗಳಿಗೆ** ಹಾಗೂ **14-06-2011 ರಂದು ಮೈಸೂರು ವಿಭಾಗದ ಅಧಿಕಾರಿಗಳಿಗೆ** ಈ ಕೆಳಕಂಡ ಕಛೇರಿಯಲ್ಲಿ ನಡೆಸಲಾಗುತ್ತಿದೆ.

ವ್ಯಕ್ತಿತ್ವ ಪರೀಕ್ಸೆಗೆ ಅರ್ಹರಿರುವ ಅಧಿಕಾರಿಗಳು ನಿಗದಿಪಡಿಸಿದ ದಿನಾಂಕದಂದು ವ್ಯಕ್ತಿತ್ವ ಪರೀಕ್ಷೆಯಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ತಪ್ಪದೇ ಹಾಜರಾಗುವಂತೆ ತಿಳಿಸಿದೆ.

**ಸೂಚನೆ** :- ಅರ್ಹರಿರುವ ಅಧಿಕಾರಿಗಳಿಗೆ ವ್ಯಕ್ತಿತ್ವ ಪರೀಕ್ಷೆಗೆ ಹಾಜರಾಗಲು ಸೂಚನಾ ಪತ್ರವನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಅರ್ಹರಿರುವ ಅಧಿಕಾರಿಗಳು ಈ ಸೂಚನಾ ಪತ್ರದ ಆದಾರದ ಮೇರೆಗೆ ಹಾಜರಾಗಲು ತಿಳಿಸಿದೆ.

ವ್ಯಕ್ತಿತ್ವ ಪರೀಕ್ಷೆಯನ್ನು ನಡೆಸುವ ಕಛೇರಿಯ ವಿಳಾಸ :- **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ನಗರ, ಸಂಖ್ಯೆ :16, 19ನೇ ಕ್ರಾಸ್, ಕೆಂಚೇನಹಳ್ಳಿ, ರಾಜರಾಜೇಶ್ವರಿ ನಗರ, ಮೈಸೂರು ರಸ್ತೆ, ಬೆಂಗಳೂರು. (ಲ್ಯಾಂಡ್ ಮಾರ್ಕ್ : ಚರ್ಚ್ ಹತ್ತಿರ)**

**ವೇಳೆ : ಬೆಳಿಗ್ಗೆ 10.30 ರಿಂದ 5.30 ರವರೆಗೆ,**

**ದಿನಾಂಕ : 13-06-2011 - ಬೆಂಗಳೂರು ವಿಭಾಗದ ಅಧಿಕಾರಿಗಳಿಗೆ**

**14-06-2011 - ಮೈಸೂರು ವಿಭಾಗದ ಅಧಿಕಾರಿಗಳಿಗೆ.**

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಎನ್.ಬಿ. ಪಾಟೀಲ)
ಜಂಟಿ ನಿರ್ದೇಶಕರು(ಆಡಳಿತ)
ಆಯುಕ್ತರ ಪರವಾಗಿ